ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ಹೌದು.

ಆ) ಕಾರ್ಖಾನೆಯನ್ನು ವಹಿಸಿಕೊಳ್ಳಲು ಭಾರತೀಯ ಉಕ್ಕು ಪ್ರಾಧಿಕಾರವು ಅಥವಾ ಕೇಂದ್ರ ಸರ್ಕಾರವು ಅಧಿಕೃತವಾಗಿ ಈ ತನಕ ಯಾವ ಪರತ್ರುಗಳನ್ನು ಹಾಕಿಲ್ಲ

ನೀರಾವರಿ ಪಂಪುಸೆಟ್ಟುಗಳಿಗೆ ಹಗಲಿನಲ್ಲಿ ವಿದ್ಯುತ್ ಪೂರೈಸುವುದು.

೭೪೨. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿರುವ ನೀರಾವರಿ ವಿದ್ಯುತ್ ಪಂಪು ಸೆಟ್ಟುಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಎಷ್ಟು ಪಂಪು ಸೆಟ್ಟುಗಳು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿವೆ ಹಾಗೂ ಎಷ್ಟು ಕೆಟ್ಟು ಹೋಗಿವೆ?

ಇ) ಪಂಪು ಸೆಟ್ಟುಗಳಿಗೆ ರಾತ್ರಿ ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡುವುದನ್ನು ಬಿಟ್ಟು ಹಗಲಿನಲ್ಲಿ ಸರಬರಾಜು ಮಾಡುವುದಕ್ಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ೩೧-೧೨-೬೭ರ ವೇಳೆಗೆ ೨೧೪ಳ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸಲಾಗಿತ್ತು.

ಆ) ಪಂಪುಸೆಟ್ಟುಗಳು ಕೆಟ್ಟು ಹೋದ ಬಗ್ಗೆ ಗ್ರಾಹಕರಿಂದ ಮನವಿಗಳು ಬರದೇ ಇದ್ದುದರಿಂದ ಈ ಬಗ್ಗೆ ವಿವರಗಳು ಇಲ್ಲ.

ಇ) ಈ ಮುಂದೆ ಗ್ರಾಮೀಣ ಫೀಡರುಗಳಲ್ಲಿ ವಿದ್ಯುತ್ ನಿಲುಗಡೆ ಹಗಲಿನಲ್ಲಿ ಬೆಳಿಗ್ಗೆ ೬ ರಿಂದ ಮಧ್ಯಾಹ್ನ ೨ರವರೆಗೆ ಮಾಡಲಾಗುತ್ತಿತ್ತು, ಆದರೆ ರೈತವರ್ಗದವರ ಮನವಿ ಮೇರೆಗೆ ಈ ವೇಳೆಯಲ್ಲಿ ಸ್ವಲ್ಪ ಮಾರ್ಪಾಟು ಮಾಡಿ ಈಗ ಒಂದು ದಿನ ಬೆಳಿಗಿನ ೬ ರಿಂದ ಮಧ್ಯಾಹ್ನ ೨ರ ವರೆಗೂ ಮಾರನೆ ದಿನ ಬೆಳಿಗಿನ ೯ ರಿಂದ ಸಾಯಂಕಾಲ ೫ ರವರೆಗೂ ವಿದ್ಯುತ್ ನಿಲುಗಡೆ ಮಾಡುವ ವಿಧಾನ ಮಾಡಲಾಗಿದೆ. ಆದ್ದರಿಂದ ಹಗಲಿನಲ್ಲೂ ವಿದ್ಯುತ್ ಲಭ್ಯವಿರುತ್ತದೆ.

ಮೇಕೆದಾಟಿನಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಯೋಜನೆ

೧೦೧೬. ಶ್ರೀ ಕೆ. ಎಲ್. ಶಿವಲಿಂಗೇಗೌಡ. (ಸಾತನೂರು).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೇಕೆದಾಟಿನ ಬಳಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಆಳತೆ ಮಂತ್ರು ಅಂದಾಜನ್ನು ತಯಾರು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕೆಲಸ ಪ್ರಾರಂಭ ಮಾಡಲು ಉಂಟಾಗಿರುವ ತೊಂದರೆಗಳೇನು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮೇಕೆದಾಟಿನ ಬಳಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಸರ್ವೆ ಕಾರ್ಯ ಪೂರೈಸಿದ್ದು ಅಂದಾಜು ಮತ್ತು ಕೂಲಂಕುಷ ಯೋಜನಾ ವರದಿಗೆ ಬೇಕಾಗಿರುವ ತಾಂತ್ರಿಕ ಅಧ್ಯಯನ ನಡೆಯುತ್ತಾ ಇದೆ.

ಆ) ಈ ಯೋಜನೆಗೆ ಅನುಮತಿ ಕೊಡಲು ಕೇಂದ್ರ ಸರ್ಕಾರದೊಡನೆ ಪ್ರಸ್ತಾಪಿಸಿದಾಗ, ಕೇಂದ್ರಮಂತ್ರಿಗಳು ಅಂತರರಾಜ್ಯ ಕಾವೇರಿ ವಿವಾದವಿರುವುದರಿಂದ ಈ ಯೋಜನೆಯನ್ನು ಈಗ